# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** (1) ಶ್ರೀ.ಬಿ.ಹೆಚ್.ಮಣ್ಣೂರ, (2) ಶ್ರೀ.ಬಿ.ಎನ್, ಬಚ್ಚೇನಹಳ್ಳಿ, (3) ಶ್ರೀ. ಎಂ.ಎ. ಗಾಜಿ ಮತ್ತು (4) ಶ್ರೀ. ಎಸ್.ಎಸ್. ಕಲ್ಮನಿ, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ನಾಗವಿ ಗ್ರಾಮ ಪಂಚಾಯಿತಿ, ಗದಗ ತಾಲ್ಲೂಕು, ಗದಗ ಜಿಲ್ಲೆ ಇವರುಗಳ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಕುರಿತು.

**ಓದಲಾಗಿದೆ:**

1. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು, ಇವರ ಅಸಪ ಸಂಖ್ಯೆ: D.O.No. Compt/UPLOK/BGM/1493/2015/ARLO-1. ದಿನಾಂಕ: 14.08.2017.
2. ಸಮಸಂಖ್ಯೆಯ ಸರ್ಕಾರದ ಪತ್ರ, ದಿನಾಂಕ 05.09.2017

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿನ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರದ ಸಂಗಡ ಕಳುಹಿಸಿರುವ ಮಾನ್ಯ ಉಪಲೋಕಾಯುಕ್ತರು–1 ರವರು ದಿನಾಂಕ: 24.07.2017 ರಂದು ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ಸಲ್ಲಿಸಿರುವ ವರದಿಯಲ್ಲಿ ಗದಗ ಜಿಲ್ಲೆ ಮತ್ತು ತಾಲ್ಲೂಕಿನ ಕಳಸಾಪುರ ಅಂಚೆಯ ನಿವಾಸಿಯಾದ ಶ್ರೀ ಮುತ್ತು ಉರುಫ್ ಧರ್ಮಪ್ಪ ಯಲ್ಲಪ್ಪ ನಾಯ್ಕರ ತಮ್ಮ ದೂರಿನಲ್ಲಿ ಗದಗ ಜಿಲ್ಲೆ ಮತ್ತು ತಾಲ್ಲೂಕು ನಾಗಾವಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾಗಿದ್ದ (1) ಶ್ರೀ. ಬಿ.ಹೆಚ್. ಮಣ್ಣೂರ (ಪ್ರಸ್ತುತ ನಿವೃತ್ತ) (2) ಶ್ರೀ.ಬಿ.ಎನ್, ಬಚ್ಚೇನಹಳ್ಳಿ, (ಅಧ್ಯಕ್ಷರು) (3) ಶ್ರೀ. ಎಂ.ಬಿ. ಗೋಡಖೆ (4) ಶ್ರೀಮತಿ. ಸುಜಾತ ಯಲ್ಲಪ್ಪ ಹಡಗಲಿ, (5) ಶ್ರೀ. ಎಂ.ಎ. ಗಾಜಿ ಮತ್ತು (6) ಶ್ರೀ. ಎಸ್.ಎಸ್. ಕಲ್ಮನಿ, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ನಾಗವಿ ಗ್ರಾಮ ಪಂಚಾಯಿತಿ, ಗದಗ ತಾಲ್ಲೂಕು, ಗದಗ ಜಿಲ್ಲೆ. ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9 ರ ಅಡಿಯಲ್ಲಿ ತನಿಖೆ ಕೈಗೊಳ್ಳಲಾಗಿದೆ. ದೂರಿನ ಸಂಕ್ಷಿಪ್ತ ವಿವರಣೆ ಕೆಂಗಿನಂತಿರುತ್ತದೆ.

> "ಗದಗ ಜಿಲ್ಲೆ ಮತ್ತು ತಾಲ್ಲೂಕು ನಾಗಾವಿ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಬರುವ ಕಳಸಾಪುರ ಗ್ರಾಮದಲ್ಲಿ 2010--11 ರಿಂದ 2012–13ನೇ ಸಾಲಿನ ಎಂಜಿಎನ್‌ಆರ್‌ಇಜಿಎ ಯೋಜನೆ ಅಡಿ 13ನೇ ಹಣಕಾಸು ಯೋಜನೆಯಲ್ಲಿ ಕಾಮಗಾರಿ ಕೈಗೊಳ್ಳದೇ ಬಿಲ್ ತೆಗೆದಿದ್ದು, ಅದೇ ಕೆಲಸಕ್ಕೆ ಪುನಃ 2014–15ನೇ ಸಾಲಿನಲ್ಲಿ ಬಿಲ್ ಮಾಡಿರುವುದು, ಬಸವ ವಸತಿ ಯೋಜನೆ ಅಡಿ 214 ಮನೆಗಳನನು ಮಂಜೂರು ಮಾಡುವಲ್ಲಿ ಅವ್ಯವಹಾರವಾಗಿದೆ, ಇಂದಿರಾ ಆವಾಸ್ ಯೋಜನೆ ಅಡಿ ಮನೆ ಕಟ್ಟದೇ ಬಿಲ್ ಮಾಡಿದ್ದಾರೆ. ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ವತಿಯಿಂದ ಮಾಡಿದ ಕಾಮಗಾರಿಗಳಿಗೆ ಗ್ರಾಮ ಪಂಚಾಯತ್‌ನಿಂದ ಬಿಲ್ ಪಾವತಿಸಿರುವುದಾಗಿ ಹೇಳಿದ್ದಾರೆ."

ಕಡತದ ಸಂಗತಿಗಳು, ತನಿಖಾಧಿಕಾರಿಗಳ ವರದಿ, ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಗಳು ಹಾಗೂ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಎದುರುದಾರರ ವಿರುದ್ಧದ ನಡವಳಿಗಳನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿ, ಆರೋಪಗಳು ಸಾಬೀತಾಗಿರುವ ಹಿನ್ನೆಲೆಯಲ್ಲಿ, (3) ಮತ್ತು 4ನೇ ಎದುರುದಾರರಾದ ಶ್ರೀ ಎಂ.ಬಿ.ಗೋಡಖೆ ಮತ್ತು ಶ್ರೀ ಸುಜಾತ ಯಲ್ಲಪ್ಪ ಹಡಗಲಿ ಇವರುಗಳು ಮಾಜಿ ಗ್ರಾಮ ಪಂಚಾಯತ್ ಅಧ್ಯಕ್ಷರುಗಳಾಗಿದ್ದು ಇವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ಅಡಿ ಸೂಕ್ತ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಸೂಚಿಸಿರುತ್ತಾರೆ.

ಹಾಗೂ 1, 2, 5 ಮತ್ತು 6ನೇ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ಕಾರಣ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬಂದಿರುವ ಹಿನ್ನೆಲೆಯಲ್ಲಿ ಇವರು ಸಾರ್ವಜನಿಕ/ ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966, ನಿಯಮ 3(1) ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ ಅವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14–ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲು ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ, (3) ಮತ್ತು 4ನೇ ಎದುರುದಾರರಾದ ಶ್ರೀ ಎಂ.ಬಿ.ಗೋಡಖೆ ಮತ್ತು ಶ್ರೀ ಸುಜಾತ ಯಲ್ಲಪ್ಪ ಹಡಗಲಿ ಇವರುಗಳು ಮಾಜಿ ಗ್ರಾಮ ಪಂಚಾಯತ್ ಅಧ್ಯಕ್ಷರುಗಳಾಗಿದ್ದು ಇವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ಅಡಿ ಸೂಕ್ತ ಕ್ರಮ ಕೈಗೊಳ್ಳಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಹಾವೇರಿ ಜಿಲ್ಲಾ ಪಂಚಾಯತಿ ಇವರಿಗೆ ಮೇಲೆ ಓದಲಾದ (2) ರಲ್ಲಿ ನಿರ್ದೇಶನ ನೀಡಲಾಗಿದೆ.

ಹಾಗೂ ಈ ಪ್ರಕರಣದಲ್ಲಿ ಭಾಗಿಯಾಗಿರುವ 1 ನೇ ಎದುರುದಾರರು ದಿನಾಂಕ 31.03.2016ರಂದು ನಿವತ್ತರಾಗಿರುವದರಿಂದ, ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ ನಿಯಮ 214(2)(ಬಿ)(ı) ಅಡಿಯಲ್ಲಿ ಮಂಜೂರಾತಿ ನೀಡಿ, ಎದುರುದಾರ 1, 2, 5 ಮತ್ತು 6 ಗಳ ((1) ಶ್ರೀ ಬಿ.ಹೆಚ್.ಮಣ್ಣೂರ, (ನಿವತ್ತ), (2) ಶ್ರೀ ಬಿ.ಎನ್, ಬಚ್ಚೇನಹಳ್ಳಿ, (5) ಶ್ರೀ ಎಂ.ಎ. ಗಾಜಿ ಮತ್ತು (5) ಶ್ರೀ ಎಸ್.ಎಸ್. ಕಲ್ಮನಿ, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ನಾಗವಿ ಗ್ರಾಮ ಪಂಚಾಯಿತಿ, ಗದಗ ತಾಲ್ಲೂಕು, ಗದಗ ಜಿಲ್ಲೆ) ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14–ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 686 ಗ್ರಾಪಂಕಾ 2017, ಬೆಂಗಳೂರು, ದಿನಾಂಕ: 05.09.2017**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, 1 ನೇ ಎದುರುದಾರರಾದ ಶ್ರೀ ಬಿ.ಹೆಚ್.ಮಣ್ಣೂರ, ಅಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ನಾಗಾವಿ ಗ್ರಾಮ ಪಂಚಾಯಿತಿ, ಗದಗ ತಾಲ್ಲೂಕು ಮತ್ತು ಜಿಲ್ಲೆ ಇವರು ದಿನಾಂಕ 31.03.2016ರಂದು ನಿವತ್ತರಾಗಿರುವದರಿಂದ, ಇವರ ಇಲಾಖಾ ವಿಚಾರಣೆ ನಡೆಸಲು ವಿರುದ್ಧ ಕರ್ನಾಟಕ ನಾಗರೀಕ ಸೇವಾ ನಿಯಮಗಳು 1957 ರ ನಿಯಮ 214(2)(ಬಿ)(1) ರಡಿ ಅನುಮತಿ ನೀಡಿ, (1) ಶ್ರೀ ಬಿ.ಹೆಚ್.ಮಣ್ಣೂರ, (ನಿವತ್ತ), (2) ಶ್ರೀ ಬಿ.ಎನ್, ಬಚ್ಚೇನಹಳ್ಳಿ, (5) ಶ್ರೀ ಎಂ.ಎ. ಗಾಜಿ ಮತ್ತು (5) ಶ್ರೀ ಎಸ್.ಎಸ್. ಕಲ್ಮನಿ – ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ನಾಗಾವಿ ಗ್ರಾಮ ಪಂಚಾಯಿತಿ, ಗದಗ ತಾಲ್ಲೂಕು ಮತ್ತು ಜಿಲ್ಲೆ ಇವರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14–ಎ ರಡಿ ಹಾಗೂ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ-8 ರ ಅಡಿ ಅಥವಾ ಕರ್ನಾಟಕ ನಾಗರೀಕ ಸೇವಾ ನಿಯಮಗಳು 1957 ರ ನಿಯಮ 214 ರಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಟಿ.ವಿ.ಅರುಣ್ ಕುಮಾರ್)**
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**<u>ಗೆ,</u>**

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತ-1 ರವರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
   **(ಮೇಲೆ ಓದಲಾದ ಪತ್ರದೊಂದಿಗೆ ಸಲ್ಲಿಸಲಾಗಿದ್ದ ಮೂಲ ಲಗತ್ತುಗಳು ಹಾಗೂ ಉಪಲೋಕಾಯುಕ್ತ ವರದಿಯನ್ನು ಪುಟ ಸಂಖ್ಯೆ 01 ರಿಂದ 127 ರವರೆಗೆ ಇದರೊಂದಿಗೆ ಲಗತ್ತಿಸಿ ಹಿಂದಿರುಗಿಸಿದೆ.)**
4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಗದಗ ಜಿಲ್ಲಾ ಪಂಚಾಯತಿ, ಹಾವೇರಿ.
5) ಕಾರ್ಯನಿರ್ವಾಹಕ ಅಧಿಕಾರಿ, ಗದಗ ತಾಲ್ಲೂಕು ಪಂಚಾಯತಿ, ಗದಗ.
   (ಸಂಬಂಧಿಸಿದ ನೌಕರರಿಗೆ ಆದೇಶದ ಪ್ರತಿಯನ್ನು ತಲುಪಿಸಿ ಸರ್ಕಾರಕ್ಕೆ ಸ್ವೀಕೃತಿ ನೀಡುವಂತೆ ಕೋರಿದೆ.)
6) 1) ಶ್ರೀ ಬಿ.ಹೆಚ್.ಮಣ್ಣೂರ (ನಿವೃತ್ತ), 2) ಶ್ರೀ ಬಿ.ಎನ್, ಬಚ್ಚೇನಹಳ್ಳಿ, 3) ಶ್ರೀ ಎಂ.ಎ. ಗಾಜಿ ಮತ್ತು 4) ಶ್ರೀ ಎಸ್.ಎಸ್. ಕಲ್ಮನಿ – ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ನಾಗಾವಿ ಗ್ರಾಮ ಪಂಚಾಯಿತಿ, ಗದಗ ತಾಲ್ಲೂಕು ಮತ್ತು ಜಿಲ್ಲೆ.
7) ಗಣಕಕೋಶ – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
8) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.